ಅಧ್ಯಕ್ಷರು: It is already more than one hour. I have closed it. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯ "ಈ" ಸಮೂಹದ ಲಿಖಿತ ಮೂಲಕ ಉತ್ತರಿಸುವ 52 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

2. ವರದಿಯನ್ನೊಪ್ಪಿಸುವುದು

ಶ್ರೀ ಕೆ.ಜಿ. ಬೋಪಯ್ಯ (ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯ 2008–09ನೇ ಸಾಲಿನ ಅರ್ಜಿಗಳ ಸಮಿತಿಯ 2005–06ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಸರ್ಕಾರ ಕೈಗೊಂಡ ಅನುಸರಣಾ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ವರದಿಯನ್ನು ಒಪ್ಪಿಸಲಾಯಿತು.

3. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ

ವಿಷಯ: ISKCON ಎನ್ನುವ ಧಾರ್ಮಿಕ ಸಂಸ್ಥೆ ನಡೆಸುತ್ತಿರುವ ಅಕ್ಷರ ದಾಸೋಹ ಕಾರ್ಯಕ್ರಮದ ಬಗ್ಗೆ

ಅಧ್ಯಕ್ಷರು: ಅವರು preliminary submission ಮಾಡಲಿ. ಶಿವಕುಮಾರ್‌ರವರೆ, ನೀವು submission ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ. Preliminary submission ಮಾಡುವುದಕ್ಕೆ ನಾನು ನಿಮಗೆ allow ಮಾಡಿದ್ದೇನೆ. ಆದರೆ, ಒಂದು ತಮ್ಮ ಗಮನದಲ್ಲಿರಲಿ, ಹಿಂದೆ ಇದೇ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಹಿಂದೆ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಹಿಂದೆ ವಿಧಾನಸಭೆಯಲ್ಲಿ ಮಾಧುಸ್ವಾಮಿಯವರು, ಮುಂತಾದವರೆಲ್ಲ ಸಾಕಷ್ಟು ಚರ್ಚೆ ಮಾಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಹಿಂದೆ ಚರ್ಚೆ ಆಗಿದೆ, ಆದರೆ, ಆದನ್ನು ಗಮನದಲ್ಲಿಟ್ಟುಕೊಂಡು I have a different issue... ಮಾನ್ಯ ಅಧ್ಯಕ್ಷರೆ, ನಾನು

ಒಂದು ಪವಿತ್ರವಾದ ವಿಚಾರದ ಬಗ್ಗೆ ಪ್ರಸ್ತಾವನೆಯನ್ನು ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಬಡವರ ಮಕ್ಕಳು ಶಾಲೆಗೆ ಬರುವಂತಾಗಲು ಮತ್ತು ಉತ್ತಮ ಶಿಕ್ಷಣ ನೀಡುವ ಸದುದ್ದೇಶದಿಂದ ಕರ್ನಾಟಕ ರಾಜ್ಯವು 2001ನೇ ಸಾಲಿನಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಪ್ರಾರಂಭಿಸಿರುವುದು ತಮಗೆಲ್ಲ ಗೊತ್ತಿರುವಂಥ ವಿಚಾರ. ಅಕ್ಷರ ದಾಸೋಹ ಕಾರ್ಯಕ್ರಮವನ್ನು ಖಾಸಗೀಕರಣ ಮಾಡುವ ವಿಚಾರದಲ್ಲಿ ಆಗ ಸಾವಿರಾರು ಸಾಮಾಜಿಕ ತುಳಿತಕ್ಕೊಳಗಾದಂಥ ಹೆಣ್ಣು ಮಕ್ಕಳು ಉದ್ಯೋಗ ವಂಚಿತರಾದುದರಿಂದ ನಾಡಿನ ಬುದ್ಧಿಜೀವಿಗಳು, ಗಣ್ಯರು, ಸಾಹಿತಿಗಳು ಹಾಗೂ ಸಾರ್ವಜನಿಕರು ಪ್ರತಿಭಟನೆ ಮೂಲಕ ವಿರೋಧಿಸುತ್ತಿದ್ದುದು ತಮಗೆ ತಿಳಿದಂಥ ವಿಚಾರ. ಬೆಂಗಳೂರಿನ ISKCON ಎನ್ನುವ ಧಾರ್ಮಿಕ ಸಂಸ್ಥೆ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಸರ್ಕಾರದಿಂದ ದೊರೆಯುತ್ತಿದ್ದ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡು ಕೂಡ ಸರ್ಕಾರದ ಪೂರ್ವಾನುಮತಿ ಇಲ್ಲದೆ ನಮ್ಮ ದೇಶದ ಬಡ ಮಕ್ಕಳ ಭಾವಚಿತ್ರವನ್ನು ವಿದೇಶದಲ್ಲಿ ಪ್ರದರ್ಶಿಸುತ್ತಾ ಕೋಟ್ಯಾಂತರ ರೂಪಾಯಿಗಳ ದೇಣಿಗೆಯನ್ನು ಸಂಗ್ರಹಿಸುತ್ತಿರುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶದ ಘನತೆ, ಗೌರವ ಮತ್ತು ಸ್ವಾಭಿಮಾನ ಹರಾಜಾಗುತ್ತಿದೆ. ISKCON ಸಂಸ್ಥೆಯ ಹಲವಾರು ಹಣಕಾಸಿನ ಅವ್ಯವಹಾರಗಳು, real estate ದಂಧೆಗಳ ಅವ್ಯವಹಾರ ಮತ್ತು ದೇವಸ್ಥಾನದ ಅವ್ಯವಹಾರದಲ್ಲಿ ಮುಳುಗಿರುವುದರಿಂದ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಅಕ್ಷರ ದಾಸೋಹ ಕಾರ್ಯಕ್ರಮ ದುರುಪಯೋಗವಾಗುತ್ತಿದೆ. ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಲ್ಲಿ ಪಾಲ್ಗೊಳ್ಳುವ ಎಲ್ಲ ಚಾರಿತ್ರ್ಯಗಳು ಪರಿಶುದ್ಧವಾಗಿರಬೇಕೆಂಬುದು, ದೇಶದ ಗೌರವ, ಘನತೆ, ನಾಡಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಸಾಮಾಜಿಕ ತುಳಿತಕ್ಕೊಳಗಾದಂಥ ಹೆಣ್ಣು ಮಕ್ಕಳ ಉದ್ಯೋಗದ ದೃಷ್ಟಿಯಿಂದ ಈ ಮಹತ್ವದ ವಿಷಯವನ್ನು ನಾನು ನಿಯಮ 60ರ ಅಡಿಯಲ್ಲಿ ಚರ್ಚಿಸಲು ತಮ್ಮನ್ನು ಕೇಳಿದ್ದೇನೆ. ತಾವು ಅವಕಾಶವನ್ನು ಕೊಟ್ಟಿದ್ದೀರಿ. ನಾನು ಇದರ ಪ್ರಸ್ತಾವನೆ ಮಾಡಬೇಕಾದರೆ, 6 ತಿಂಗಳ ಕಾಲ ಅಧ್ಯಯನ ಮಾಡಿದ್ದೇನೆ. 3333 ರೂ.ಗಳನ್ನು ಕೊಟ್ಟು ನಾನೊಬ್ಬ ISKCON ಸಂಸ್ಥೆಯ life member ಆಗಿದ್ದೇನೆ. ನಾನು ಆ ಸಂಸ್ಥೆಯ ದೊಡ್ಡ ಅಭಿಮಾನಿಯಾಗಿದ್ದೇನೆ. ಇವತ್ತೂ ಕೂಡ ಹೊರಗಡೆ ದೇಶದಿಂದ ಯಾರೇ ಬರಲಿ, ಹೊರಗಡೆ ರಾಜ್ಯದಿಂದ ಯಾರೇ ಬರಲಿ ಯಾರಿಗಾದರೂ

ಬೆಂಗಳೂರಿನಲ್ಲಿ ಒಂದು ಜಾಗ ತೋರಿಸಬೇಕೆಂದರೆ, ನಾನು ISKCON ಸಂಸ್ಥೆಗೆ, ದೇವಸ್ಥಾನಕ್ಕೆ ಕಳುಹಿಸಿ ಕೊಡುವುದು ನನ್ನ ಕರ್ತವ್ಯ. ಕರ್ತವ್ಯ ಎಂದು ತಿಳಿದುಕೊಂಡು ಆ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಈ ಅಕ್ಷರ ದಾಸೋಹ ಕಾರ್ಯಕ್ರಮ ಸ್ಥಾಪಿಸಿದ ಸರ್ಕಾರದಲ್ಲಿ ನಾನೊಬ್ಬ ಸದಸ್ಯನಾಗಿದೆ. ಪ್ರೇರಿತನಾದೆ. ಅಕ್ಷರ ದಾಸೋಹದ ಬಗ್ಗೆ ತಾಲ್ಲೂಕು ಮಟ್ಟದ ಅಧಿಕಾರಿಗಳ ಹತ್ತಿರ ಕೂಡ ನಾನು ಚರ್ಚೆ ಮಾಡಿದ್ದೇನೆ. ಶಾಲೆಯಲ್ಲಿ ಬಿಸಿ ಊಟ ತಿಂದು ಇಲ್ಲಿಗೆ ಬಂದಿದ್ದೇನೆ. ISKCON ಊಟ ತಿಂದ ಬಂದಿದ್ದೇನೆ. ಅಕ್ಷಯ ಪಾತ್ರೆಯ ಊಟ ತಿಂದು ಇಲ್ಲಿಗೆ ಬಂದಿದ್ದೇನೆ. ಶಾಲಾ ಮಕ್ಕಳ ಜೊತೆ ಜೊತೆಯಲ್ಲಿ ಅವರ ತಂದೆತಾಯಿ ಜೊತೆ ಮಾತನಾಡಿ ಇಲ್ಲಿಗೆ ಬಂದಿದ್ದೇನೆ. 2002ರಲ್ಲಿ ISKCON ಸಂಸ್ಥೆಗೆ ಹೋಗಿ ಅಭಿನಂದನೆಯನ್ನು ಕೂಡ ನಾನು ಸಲ್ಲಿಸಿದ್ದೇನೆ. ಇಂದು ISKCON ಗೆ donation ನೀಡುತ್ತಿರುವ corporate ಸಂಸ್ಥೆಗಳ ಜೊತೆಯಲ್ಲಿ ನಾನು ಮಾತನಾಡಿ ಇಲ್ಲಿಗೆ ಬಂದಿದ್ದೇನೆ. ISKCONನಲ್ಲಿ ಸೇವೆ ಸಲ್ಲಿಸುತ್ತಿರುವ ಭಕ್ತವೃಂದದ ಜೊತೆ ಮಾತನಾಡಿ ಇಲ್ಲಿಗೆ ಬಂದಿದ್ದೇನೆ. ಅವರ ಸೇವೆ ಸಲ್ಲಿಸುತ್ತಿರುವ ದಾಸರ ಜೊತೆ ಸಹ ನಾನು ಚರ್ಚಿಸಿದ್ದೇನೆ. ISKCON ಪರವಾಗಿ corporate ಸಂಸ್ಥೆಗಳು ದಾನಿಯಾಗಿ ಅದೂ ಏನೂ ಅಪೇಕ್ಷೆ ಇಲ್ಲದೆ ಕೊಡುವ ದಾನಿಗಳನ್ನೂ ಕೂಡ ಮತ್ತು ಅವರ ಪರವಾಗಿ ದಾನಿಗಳಿಂದ ಚಂದಾ ವಸೂಲಿ ಮಾಡುತ್ತಿರುವ ನೌಕರರ ಜೊತೆ ಕೂಡ ನಾನು ಚರ್ಚಿಸಿದ್ದೇನೆ. ಇದರ ಜೊತೆಗೆ, ISKCON ಸಂಸ್ಥೆಯಲ್ಲಿ ಕೃಷ್ಣಲೀಲೆ ನಡೆಸಲು ಯತ್ನಿಸಿದಾಗ ಕಪಾಳಮೋಕ್ಷ ಮಾಡಿದ ಆ ಹೆಣ್ಣುಮಗಳ ಹತ್ತಿರ ಕೂಡ ನಾನು ಮಾತನಾಡಿ ಬಂದಿದ್ದೇನೆ. ISKCON ಸಂಸ್ಥೆಯನ್ನು ಕಟ್ಟಿದ ಮೂಲ ದಾಸರನ್ನು ನಾನು ಭೇಟಿ ಮಾಡಿದ್ದೇನೆ. ಮಧುಪಂಡಿತದಾಸ್ ಅಲಿಯಾಸ್ ಮಧುಸೂದನ್ ನಾಯರ್ ಎಂಬುವವರು ಕೇರಳ ಮೂಲದವರಾಗಿದ್ದು ಅವರ Co-brother ಆದ ಚಂಚಲಪತಿದಾಸ್ ಅಲಿಯಾಸ್ ಚಂದ್ರಶೇಖರ್ ಈ ಇಬ್ಬರನ್ನೂ ಕೂಡ ನಾನು ಭೇಟಿ ಮಾಡಿದ್ದೇನೆ. ಇವರಿಗೆ ಒಂದು ಕಾಲದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸಿಗಬೇಕೆಂದು ನಾನು recommend ಮಾಡಿದ್ದುಂಟು. 6 ವರ್ಷಗಳ ಈ ಕಾರ್ಯಕ್ರಮದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸಂಗ್ರಹಿಸಿದ್ದು, ಕೆಲಸದಿಂದ ವಂಚಿತರಾದ 60 ಸಿಬ್ಬಂದಿಗಳನ್ನು ನಾನು ಭೇಟಿಯಾಗಿದ್ದೇನೆ. ಈ ಕಾರ್ಯಕ್ರಮಕ್ಕೋಸ್ಕರ ಹಣ ಸಂಗ್ರಹಣೆ ಮಾಡುತ್ತಿದ್ದಂಥ ಸಿಬ್ಬಂದಿಗಳಿದ್ದರಲ್ಲ ಅವರನ್ನೂ ನಾನು ಭೇಟಿಯಾಗಿ ಚರ್ಚಿಸಿ ಮಾಹಿತಿಯನ್ನು ಪಡೆದಿದ್ದೇನೆ.

ISKCON ಸಂಸ್ಥೆಯಲ್ಲಿ ಕಳ್ಳ ಸಾಗಾಣಿಕೆ ಮಾಡುತ್ತಿದ್ದ ಪ್ರಕರಣದ ಬಗ್ಗೆ ಆರೋಪ ಪಟ್ಟಿ ಸಲ್ಲಿಸಿದ್ದ ಪೊಲೀಸ್ ಅಧಿಕಾರಿಯ ಜೊತೆ ಕೂಡ ನಾನು ಚರ್ಚಿಸಿದ್ದೇನೆ. ಈ ಬಗ್ಗೆ raid ಮಾಡಿ FIR ದಾಖಲಿಸಿದ್ದ Food ಇಲಾಖಾಧಿಕಾರಿಗಳ ಜೊತೆಗೆ ನಾನು ಚರ್ಚೆ ಮಾಡಿದ್ದೇನೆ. ISKCON ಸಂಸ್ಥೆಯು ನಿರ್ವಹಿಸುತ್ತಿರುವ kitchenಗೆ ಕೂಡ ನಾನು ಭೇಟಿ ನೀಡಿದ್ದೇನೆ. ISKCON ಸಂಸ್ಥೆ ಕಟ್ಟಿಸಿರುವ ಭರ್ಜರಿ apartmentಗೆ ಕೂಡ ನಾನು ಭೇಟಿ ನೀಡಿದ್ದೇನೆ. ನಾನು ಈ ISKCON ದೇಸ್ಥಾನಕ್ಕೂ ಹೋಗಿದ್ದೆ, ಕಳೆದ ವಾರ ಉಡುಪಿ ಮಠಕ್ಕೂ ಹೋಗಿದ್ದೆ. ಅಲ್ಲಿಗೆ ಹೋದಾಗ ಆ ಬಾಗಿಲಿನಲ್ಲಿ ಭಗವದ್ಗೀತೆಯ ಒಂದು ಶ್ಲೋಕ ಬರೆದಿರುವುದನ್ನು ನೋಡಿದೆ. ಅದು ಬಹಳ ಪ್ರಸಿದ್ಧವಾದ ಶ್ಲೋಕ:

ಯದಾ ಯದಾ ಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಂ ಅಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ
ಪರಿತ್ರಾಣಾಯ ಸಾಧುನಾಂ ವಿನಾಶಾಯ ಚದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ
ಸಂಭವಾಮಿ ಯುಗೇ ಯುಗೇ

ಎಂದು ಆ ಬಾಗಿಲ ಮೇಲೆ ಬರೆದಿತ್ತು. ಉಡುಪಿ ಕೃಷ್ಣ ದೇವಸ್ಥಾನದ ಬಾಗಿಲ ಮೇಲೆ ಮತ್ತು ISKCON ಕೃಷ್ಣ ದೇವಸ್ಥಾನದ ಬಾಗಿಲಿನ ಮೇಲೆ ಈ ಶ್ಲೋಕವಿತ್ತು. ಅದರರ್ಥವೇನೆಂದರೆ, ಅಧರ್ಮವು ಹೆಚ್ಚಿದಾಗ, ನ್ಯಾಯ ನಾಶವಾದಾಗ, ಸಾಧು ಸಂತರಿಗೆ, ಸಾಮಾನ್ಯ ಜನರಿಗೆ ರಕ್ಷಣೆ ಇಲ್ಲದಾಗ ಲೋಕಕಲ್ಯಾಣಕ್ಕಾಗಿ ನಾನು ಮತ್ತೆ ಹುಟ್ಟಿ ಬರುತ್ತೇನೆ, ಮತ್ತೆ ಹುಟ್ಟಿ ಬರುತ್ತೇನೆಂದು ಭಗವಾನ್ ಶ್ರೀ ಕೃಷ್ಣ ತನ್ನ ಉವಾಚದಲ್ಲಿ ಈ ಶಬ್ದವನ್ನು ಹೇಳುತ್ತಾನೆ. ಆ ಕೃಷ್ಣ ಇವತ್ತು ಮತ್ತೆ ಹುಟ್ಟಿ ಬರಬೇಕೆಂದು ನಾನು ಆಪೇಕ್ಷೆ ಪಡುತ್ತೇನೆ. ಯಾರದು ಆ ಕೃಷ್ಣ? ಈ ಸರ್ಕಾರ ಕೃಷ್ಣ ಆಗಬೇಕು. ಮುಖ್ಯಮಂತ್ರಿಯವರು ಕೃಷ್ಣ ಆಗಬೇಕು. ಕಾಗೇರಿಯವರು ಕೃಷ್ಣ ಆಗಬೇಕು. ಸುರೇಶ್‌ಕುಮಾರ್‌ರವರು ಕೃಷ್ಣ ಆಗಬೇಕು. Food Minister ರವರು ಕೃಷ್ಣ ಆಗಬೇಕು. ಏಕೆಂದರೆ, ಇದು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ವಿಚಾರ, ಆಹಾರ ಇಲಾಖೆಗೆ ಸಂಬಂಧಪಟ್ಟ ವಿಚಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ವಿಚಾರ, ನನ್ನ ಸೋದರಿಯಾದ ಶೋಭಾ

ಕರಂದ್ಲಾಜೆಯವರ ಇಲಾಖೆಯಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟ ವಿಚಾರ, ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ವಿಚಾರ. ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ವಿಚಾರ, ಗೃಹ ಇಲಾಖೆಗೆ ಸಂಬಂಧಪಟ್ಟ ವಿಚಾರ, ಆದಾಯ ತೆರಿಗೆ ಇಲಾಖೆಗೂ ಸಂಬಂಧಪಟ್ಟ ವಿಚಾರ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಈ ದೇಶದ ಸ್ವಾಭಿಮಾನವನ್ನು ಕಾಪಾಡುವಂಥ ವಿಚಾರ. CBI ಕೂಡ ಇದರ ಬಗ್ಗೆ ಕೈ ಹಾಕಬೇಕಾದಂಥ ವಿಚಾರ. ಇಂಥ ಸಂದರ್ಭದಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕೆಲ್ಲ ನೀವೇ ಸೃಷ್ಟಿಕರ್ತರು ತಾನೆ ಎನ್ನುವ ಪ್ರಶ್ನೆಯನ್ನು ಅನೇಕ ಸ್ನೇಹಿತರು ಮುಂದೆ ಮಾತನಾಡುವಾಗ ಕೇಳಬಹುದು. ಆದರೆ, ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಮ್ಮ ಸಂವಿಧಾನವನ್ನು ಈ ದೇಶಕ್ಕೆ ಕೊಟ್ಟ ಸಂದರ್ಭದಲ್ಲಿ ಉತ್ತಮವಾದ ಸಂವಿಧಾನವನ್ನು ಎಲ್ಲಾ ಜಾತಿ, ಎಲ್ಲಾ ಧರ್ಮ, ಎಲ್ಲಾ ಜನರಿಗೆ ಕೊಟ್ಟಂಥ ಸಂದರ್ಭದಲ್ಲಿ ನಾವು ನೂರಾರು amendment ಗಳನ್ನು ಇಲ್ಲಿಯವರೆಗೆ ಮಾಡಿಕೊಂಡು ಬಂದಿದ್ದೇನೆ. ನಾವು ಮಾಡಿದಂಥ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಇವತ್ತು ಸರ್ಕಾರಕ್ಕೂ ಕೂಡ ಬೇಕಾದಷ್ಟು ಅವಕಾಶವಿದೆ. ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ನಾವು ಇದನ್ನು ಪ್ರಾರಂಭ ಮಾಡಿದಾಗ, ಅವರಿಗೆ ಒಂದು ಆಶೆ ಏನಿತ್ತೆಂದರೆ, ನಮ್ಮ ಮಕ್ಕಳು ನಗುನಗುತ್ತಾ ಇರಬೇಕು, ಮಕ್ಕಳಿಗೋಸ್ಕರ ಆಸ್ತಿ ಮಾಡುವುದಕ್ಕಿಂತಲೂ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕೆನ್ನುವ ಚಿಂತನೆ ಅವರಲ್ಲಿತ್ತು. ಅವರು ಈ ಕಾರ್ಯಕ್ರಮವನ್ನು ಮಾಡುವಾಗ On line lottery ಹಣದಲ್ಲಿ ಮಾಡುತ್ತೇವೆಂದು ಹೇಳಿದರು. ಆಗ ಇದಕ್ಕೆ ಬೇಕಾದಷ್ಟು ಟೀಕೆ ಆಯಿತು. ಇಂಥ ಜೂಜು ಹಣದಲ್ಲಿ ನಮ್ಮ ಮಕ್ಕಳು ಊಟ ಮಾಡಬೇಕೆ? ನಮ್ಮ ಸಂಸ್ಕೃತಿಯನ್ನು ನೀವು ಹರಾಜು ಹಾಕುತ್ತಿದ್ದೀರಿ, ನಯವಂಚಕರಾಗಿ ಇಂಥ ಕೆಲಸವನ್ನು ಮಾಡುತ್ತಿದ್ದೀರಿ ಎಂದು ಬೇಕಾದಷ್ಟು ಟೀಕೆ ಆಯಿತು. ಡಿ.ವಿ.ಜಿ. ಯವರು,

ನಗುವುದು ಸಹಜ ಧರ್ಮ, ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತಾ ಬಾಳುವ
ವರವಮಿಗೆ ನೀನು ಬೇಡಿಕೊಳೊ ಮಂಕುತಿಮ್ಮ

ಎಂದು ಹೇಳಿದ್ದಾರೆ. ನಮ್ಮ ಮಕ್ಕಳು ನಗುನಗುತ್ತಾ ಇರಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ಇದು ಹೇಗಿದೆ ಎಂದರೆ, ಭೂತದ ಬಾಯಲ್ಲಿ ಭಗವದ್ಗೀತೆ ಕೇಳೀದ ಹಾಗಾಯಿತು.

ಶ್ರೀ ಎಂ. ಶ್ರೀನಿವಾಸ್: ನಾವೂ ಸೇರಿ ಬಿ.ಡಿ.ಎ. ಯಿಂದ ಅದಕ್ಕೆ ಜಾಗವನ್ನು ಕೊಟ್ಟಿದ್ದೆವು. ರೋಷನ್ ಬೇಗ್‌ರವರು ತಮ್ಮ ಪಕ್ಕದಲ್ಲಿಯೇ ಇದ್ದಾರೆ. ಅವರಿಗೆ ಗೊತ್ತಿದೆ. ಅವರಿಗೆ ಬೇಕಾದರೆ ಕೇಳಿ, ಬಿ.ಡಿ.ಎ. ಮೆಂಬರ್ ಇದ್ದಾಗ 6.5 ಎಕರೆ ಜಮೀನನ್ನು ನಾವೆ ಕೊಟ್ಟಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್: ಬಚ್ಚೇಗೌಡರು ನನಗೆ ಭೂತದ ಬಾಯಲ್ಲಿ ಭಗವದ್ಗೀತೆ ಎಂದು ಹೇಳಿದರು. ಬಹಳ ಸಂತೋಷ. ಬಹಳ ಗೌರವದಿಂದ ಸ್ವೀಕರಿಸುತ್ತೇನೆ. ತಾವು ಹಿರಿಯರು. ತಾವು ಏನು ಹೇಳಿದರೂ ನಾನು ಈ ವಿಷಯವನ್ನು divert ಮಾಡಿಕೊಳ್ಳುವುದಿಲ್ಲ. ಆ ಬಗ್ಗೆ ಸಂದರ್ಭ ಬಂದಾಗ reply ಮಾಡುತ್ತೇನೆ. ಏಕೆಂದರೆ, ಇದು ಮಹತ್ವವಾದ ವಿಚಾರ. ಇದು ನಿಮ್ಮ ವಿಚಾರ, ನಮ್ಮ ವಿಚಾರ, ಈ ದೇಶದ ಸ್ವಾಭಿಮಾನದ ವಿಚಾರವಾಗಿದೆ. ಆ ಭೂತ, ಭಗವದ್ಗೀತೆ ಏನು ಎನ್ನುವುದನ್ನು ಆ ಮೇಲೆ ಚರ್ಚೆ ಮಾಡೋಣ. ಈ ರಾಜ್ಯದಿಂದ ನೂರಾರು ಜನ World Leaders ಅನ್ನು ತಯಾರಿಸಿದ್ದೇವೆ. ಒಳ್ಳೆಯ ಇಂಜಿನಿಯರ್‌ಗಳನ್ನು, ಡಾಕ್ಟರ್‌ಗಳನ್ನು ತಯಾರು ಮಾಡಿದ್ದೇವೆ. ತಾವು ಸಿದ್ದಗಂಗಾ ಮಠಕ್ಕೆ ಬಹಳ ಸಲ ಹೋಗಿದ್ದೀರಿ. ತಮಗೆಲ್ಲ ಗೊತ್ತಿದೆ. ಕನಕಪುರದಲ್ಲಿರುವ ಮಠವನ್ನು ನೋಡಿದ್ದೀರಿ. ಬಾಲಗಂಗಾಧರಸ್ವಾಮಿಜಿಯವರ ಮಠವನ್ನು ನೋಡಿದ್ದೀರಿ. ನಿಮ್ಮ ಕಡೆ ಸಾವಿರಾರು ಮಠಗಳಿವೆ, ಮೂರುಸಾವಿರ ಎನ್ನುವ ಮಠ ಇದೆ. ಎಲ್ಲಾ ಮಠಗಳಲ್ಲಿಯೂ ಕೂಡ ಈ ದಾಸೋಹ ಕಾರ್ಯಕ್ರಮ ನಡೆದುಕೊಂಡು ಬಂದಿದೆ. ಎಂಥ ಗೌರವದಿಂದ, ಸ್ವಾಭಿಮಾನದಿಂದ ಅವರ ಮಠಗಳಲ್ಲಿ, ಅವರ ಆಸ್ತಿಗಳಲ್ಲಿ ಬೆಳೆದ ಪದಾರ್ಥಗಳಿಂದ ಇವತ್ತು ಮಕ್ಕಳನ್ನು ಬೇಕಾದಷ್ಟು ಜನರನ್ನು, ಈ ಮನೆಯಲ್ಲಿರುವ ಸದಸ್ಯರೂ ಕೂಡ ತಯಾರು ಮಾಡಿ ಕಳುಹಿಸಿ ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ದೊಡ್ಡ ಶಕ್ತಿಯಾಗಿ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಅನೇಕ ವಿದೇಶಗಳಲ್ಲಿ ನೋಡಿರಬಹುದು. ಎಂಥೆಂಥ Universityಗಳಲ್ಲಿ Scientists, Professors, Vice-Chancellors ಆಗಿ, No. 1 ಎನ್ನುವವರು ಆ ದೇಶದವರನ್ನು ಬಿಟ್ಟರೆ ಎರಡನೇ, ಮೂರನೇ ಸ್ಥಾನದಲ್ಲಿರುವವರೆಲ್ಲ ಬಹುಶಃ ನಮ್ಮ ದೇಶದ ಮಕ್ಕಳೆ, ರಾಜ್ಯದ ಪ್ರಜೆಗಳೇ ಇವತ್ತು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಇಂಥ ಮಠಗಳಲ್ಲಿ ಊಟ ಮಾಡಿಕೊಂಡು ಜೀವನ ಮಾಡಿ ಅಷ್ಟು ದೊಡ್ಡ

ವಿದ್ಯಾವಂತರಾಗಿರುವುದನ್ನು ನಾವೆಲ್ಲ ಕಂಡಿದ್ದೇವೆ. ಒಂದು ಕಾಲದಲ್ಲಿ ಭಾರತದಲ್ಲಿ ಕ್ಷಾಮ ಇತ್ತು. ಬಹುಶಃ PL 480 ಎಂದು ತಮಗೆಲ್ಲ ನೆನಪಿರಬಹುದು. ಉಪ್ಪಿಟ್ಟು, ರವೆ, ಹಾಲಿನ ಪುಡಿ ಇವೆಲ್ಲವನ್ನು ಅಮೇರಿಕಾ ದೇಶದಿಂದ ತರಿಸುವ ಕಾಲ ಒಂದಿತ್ತು. ಆದರೆ, ಆಗ ಲಾಲ್‌ಬಹದ್ದೂರ್‌ಶಾಸ್ತ್ರಿಯವರು 'ಜೈ ಜವಾನ್, ಜೈ ಕಿಸಾನ್' ಎನ್ನುವ ಒಂದು ಕರೆ ಕೊಟ್ಟ ಮೇಲೆ ಹಸಿರು ಕ್ರಾಂತಿ ಪ್ರಾರಂಭವಾಯಿತು. ಶ್ರೀಮತಿ ಇಂದಿರಾಗಾಂಧಯವರು ಒಂದು ಚಿಂತನೆ ಮಾಡಿ ಈ ಆಹಾರ ಉತ್ಪಾದನೆಗೆ ಸರಿಯಾದ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಪಂಚವಾರ್ಷಿಕ ಯೋಜನೆಯಲ್ಲಿ ಅತಿ ಹೆಚ್ಚು ಆಹಾರ ಉತ್ಪಾದನೆ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಬಹುಶಃ ಇಲ್ಲಿಂದ ಆಹಾರ ಪದಾರ್ಥದ ತಯಾರಿಕೆಯಲ್ಲಿ ನಾವು ಮುಂದಕ್ಕೆ ಹೋಗಿ ಈ ದೇಶ ತನ್ನ ಕಾಲ ಮೇಲೆ ತಾನು ನಿಂತು ಕೊಳ್ಳುವಂತಾಯಿತು. ಶ್ರೀ ಶರದ್ ಪವಾರ್‌ರವರು ಮೊನ್ನೆ ಮೂರು ವರ್ಷಗಳಿಗಾಗುವಷ್ಟು ಆಹಾರ ಪದಾರ್ಥಗಳು ನಮ್ಮ ದೇಶದಲ್ಲಿದೆ ಎಂದು ಹೇಳಿದ್ದಾರೆ. ನಮ್ಮ ದಾಸೋಹ ಸಂಸ್ಕೃತಿ ಕರ್ನಾಟಕ ರಾಜ್ಯದ ಹೆಮ್ಮೆಯ ಕೊಡುಗೆಯಾಗಿದೆ. ನಾಡಿನ ಎಲ್ಲಾ ಮಠಗಳು ಈ ದಾಸೋಹವನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಶತ ಶತಮಾನಗಳಿಂದ ನಡೆಸಿಕೊಂಡು ಬಂದಿರುವುದನ್ನು ನಾವು ನೋಡಿದ್ದೇವೆ. ಆದರೆ, ನಾನಿಲ್ಲಿ ಚಂದಮಾಮ ಕಥೆ ಹೇಳುತ್ತಿಲ್ಲ. 'ಚಂದಾ ಮಾಮನ' ಕಥೆ ಹೇಳುತ್ತಿದ್ದೇನೆ. 'ಅಕ್ಕಿ ತಿನ್ನುವ ಹಕ್ಕಿಗಳಾಗದೆ ಅಕ್ಕಿಯ ಮೇಲೆ ಆಸೆ, ಮಕ್ಕಳ ಮೇಲೆ ಪ್ರೀತಿ' – ಇವತ್ತು ನಾವು ಇಂಥ ಪರಿಸ್ಥಿತಿಯಲ್ಲಿದ್ದೇವೆ. ನಮ್ಮ ಮಕ್ಕಳ್ಯಾರೂ ನಮಗೆ ಊಟ ಬೇಕೆಂದು ಅರ್ಜಿ ಹಾಕಿರಲಿಲ್ಲ. ತಂದೆತಾಯಿಗಳ್ಯಾರೂ ಊಟ ಬೇಕೆಂದು ಅರ್ಜಿ ಹಾಕಿರಲಿಲ್ಲ. ಸರ್ಕಾರದವರು ಇವರನ್ಯಾರನ್ನೂ ಕರೆದಿರಲಿಲ್ಲ. ಎಷ್ಟು ಸಂಸ್ಥೆಯವರು ಇಂಥ ಒಂದು ಕೆಲಸವನ್ನು ಮಾಡುತ್ತಿದ್ದಾರೆನ್ನುವುದಕ್ಕೆ ನನ್ನ ಹತ್ತಿರ ಒಂದು list ಇದೆ. ಆ ಬಗ್ಗೆ ನಾನು ಬೇರೆ ಸಂದರ್ಭದಲ್ಲಿ ಮಾತನಾಡುತ್ತೇನೆ. ಆದರೆ, ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಭಾರತ ದೇಶದ ಗೌರವಕ್ಕೆ ಧಕ್ಕೆಯಾಗುತ್ತದೆ, ದಿವಾಳಿಯಾಗುತ್ತಿದೆ, ಅದಕ್ಕೋಸ್ಕರ ನಾನು ಈ ವಿಚಾರವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುತ್ತಿದ್ದೇನೆ. ನನ್ನ ಹತ್ತಿರವಿರುವ ಒಂದು photograph ಮತ್ತು C.D. ಯನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಆ C.D. ಯಲ್ಲಿ ಎನಿದೆ ಎಂದರೆ, ಅಕ್ಷಯ ಪಾತ್ರೆಯ ಕಾರ್ಯಕ್ರಮದ ಮೂಲಕ ಯಾವ ರೀತಿ ಭಾರತ

ದೇಶವನ್ನು ಪ್ರತಿಬಿಂಬಿಸುತ್ತಿದ್ದಾರೆ, ಯಾವ ರೀತಿ ನಮ್ಮ ಮಕ್ಕಳನ್ನು ಪ್ರತಿಬಿಂಬಿಸುತ್ತಿದ್ದಾರೆ ಎನ್ನುವುದಿ ಇದೆ. ಈ Photo ದಲ್ಲಿ ಒಂದು ಮಗು "I wish to die soon" ಎಂದು ಹೇಳುತ್ತಿರುವ ಚಿತ್ರ ಮತ್ತು ಪದಗಳಿವೆ. ನಿಮಗೆಲ್ಲರಿಗೂ ಕೂಡ ನಾನು C.D. ಯನ್ನು ಕೊಡುತ್ತೇನೆ. ಈ ನಾನು ತಯಾರಿಸಿದ್ದಲ್ಲ, ISKCON ಸಂಸ್ಥೆಯವರು ತಯಾರಿಸಿದ C.D. ಆಗಿರುತ್ತದೆ. ಇಂಥ ಸಂದರ್ಭದಲ್ಲಿ ಇಂಥ ಸಿ.ಡಿಯನ್ನು ತೋರಿಸಿ ಈ ದೇಶದಲ್ಲಿ this is the vision of Akshaya Patre foundation ಎನ್ನುತ್ತಿದ್ದಾರೆ. ಆದರೆ, ನಿಮಗೂ ಇದಕ್ಕೂ ಏನು ಸಂಬಂಧ ಎಂದು ನೀವು ಕೇಳಬಹುದು. ಇದು ನಾವು ಪ್ರಾರಂಭಿಸಿದ ಕಾರ್ಯಕ್ರಮ. ಕರ್ನಾಟಕ ಸರ್ಕಾರ ಪ್ರಾರಂಭಿಸಿದ ಕಾರ್ಯಕ್ರಮ. ಬಡ ಜನರಿಗೋಸ್ಕರ ಮಾಡಿದ ಕಾರ್ಯಕ್ರಮದ. ಅಲ್ಲಮ ಪ್ರಭುಗಳು ಒಂದು ಕಡೆ,

ಶಿಲೆಯೊಳಗಣ ಪಾವಕದಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ಧದೊಳಗಣ ನಿಶಬ್ಧದಂತೆ
ಗುಹೇಶ್ವರ, ನಿಮ್ಮ ಶರಣ ಸಂಬಂಧ

ಅಂದರೆ, ಭಗವಂತನಿಗೂ ಭಕ್ತನಿಗೂ ಯಾವ ರೀತಿ ಸಂಬಂಧ ಇದೆಯೋ ಹಾಗೆಯೇ ಈ ಅಕ್ಷರ ದಾಸೋಹಕ್ಕೂ ನನಗೆ ಇರುವ ಸಮಬಂಧ ಇದೆ. ನಾವು ಈ ಕಾರ್ಯಕ್ರಮ ತರಬೇಕು, ಮಾಡಬೇಕು, ಮಕ್ಕಳು ನಗುನಗುತ್ತಾ ಇರಬೇಕು ಎಂದು ಮಾಡಿದ್ದೆವು. ನಿನ್ನೆಯೇ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಆದರೆ, ಗ್ರಹಣವಿತ್ತು. ಇವತ್ತು ನಾನು ಪ್ರಸ್ತಾಪಿಸುತ್ತಿದ್ದೇನೆ. ಆದರೆ, ಅದು ಎಂಥಾ ಗಳಿಗೆಯಲಿ ಗೊತ್ತೇ?

ಬುದ್ಧ ಬಸವ ಮನೆ ಬಿಟ್ಟ ಗಳಿಗೆಯಲಿ
ಏಸು ಕ್ರಿಸ್ತನು ಶಿಲುಬೆಗೇರಿದ ಗಳಿಗೆಯಲಿ,
ಪೈಗಂಬರರು ದಿವ್ಯ ವಾಣಿ ಕೇಳಿದ ಗಳಿಗೆಯಲಿ,
ಭೀಮಾಬಾಯಿಯವರು ಅಂಬೇಡಕರ್‌ರಿಗೆ ಜನ್ಮ ಕೊಟ್ಟ ಗಳಿಗೆಯಲಿ,
ಮಹಾತ್ಮ ಗಾಂಧಿಜೀಯವರು ಕಾಂಗ್ರೆಸ್ ನಾಯಕತ್ವ ವಹಿಸಿದ ಗಳಿಗೆಯಲಿ,
ಮಾಗಡಿ ಕೆಂಪೇಗೌಡರು ಬೆಂಗಳೂರು ಕಟ್ಟಿದ ಗಳಿಗೆಯಲಿ,
ಹನುಮಂತಯ್ಯನವರು ವಿಧಾನಸೌಧ ಕಟ್ಟಿದ ಗಳಿಗೆಯಲಿ

ನಾನು ಇಂಥ ವಿಚಾರವನ್ನು ಇಂಥ ಪವಿತ್ರವಾದ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ, ಈ ದೇಶದ ಸ್ವಾಭಿಮಾನವನ್ನು, ಅನ್ನಕ್ಕಾಗಿ ವಿದೇಶದಲ್ಲಿ ಮಾರ್ಕೆಟಿಂಗ್ ನಡೆಯುತ್ತಿರುವ ಸಂಸ್ಥೆಯನ್ನು ನಮ್ಮನ್ನು ಹಿಂದೆ ಭಿಕ್ಷುಕರಂತೆ ನೋಡುತ್ತಿದ್ದರು.

ಶ್ರೀ ಅವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು): ಡಿ.ಕೆ. ಶಿವಕುಮಾರ್‌ರವರು ಇಷ್ಟು ವ್ಯವಸ್ಥಿತವಾಗಿ ಪ್ರಾಸಬದ್ಧವಾಗಿ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಅದಕ್ಕೆ ಸದನದ ಪರವಾಗಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಸುರೇಶ್ ಕುಮಾರ್‌ರವರಿಗೆ ಗೊತ್ತಿದೆ. ನಾನು ಎಲ್ಲಿಂದ ಪ್ರಾರಂಭವಾಗಿದ್ದು ಗೊತ್ತೇ. ನಮಸ್ತೆ ಸದಾ ವತ್ಸಲೆ ಮಾತೃಭೂಮಿ...

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಇಷ್ಟರ ಮಟ್ಟಿಗೆ ಪರಿವರ್ತನೆಯಾಗಿದ್ದೀರಲ್ಲ ನಿಮಗೆ ಧನ್ಯವಾದಗಳನ್ನು ಅರ್ಪಿಸಬೇಕು. ದೇವರ ಬಗ್ಗೆ ಸಂಘದ ಬಗ್ಗೆ ಭಗವದ್ಗೀತೆಯ ಬಗ್ಗೆ ಹೇಳಿದ್ದಕ್ಕೆ ನಿಮಗೆ ಧನ್ಯವಾದ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ಸದ್ಯಕ್ಕೆ ಈ ಸದನವನ್ನು ಕುರುಕ್ಷೇತ್ರ ಎಂದು ಭಾವಿಸುವುದಾದರೆ, ಪಾಂಡವರು ಈ ಕಡೆ ಇದ್ದಾರೆ, ಪಕ್ಷಪಾತಿಯಾಗಿ ಶ್ರೀ ಕೃಷ್ಣ ಹೇಳುತ್ತಿದ್ದಾರೆ. ಮತ್ತೆ ಕೌರವರೆಲ್ಲರೂ ತಾವು ಇದ್ದೀರಿ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದರಲ್ಲಿ ನಿಮ್ಮ ಪಾತ್ರ ಏನು?

ಶ್ರೀ ಸಿ.ಟಿ. ರವಿ: ಅವರದು ಹೇಗೆ ಎಂದರೆ, ವೈಶಂಪಾಯನ ಸರೋವರದಿಂದ ಮೇಲೆದ್ದ ದುರ್ಯೋಧನನ ಪ್ರಲಾಪ ಇದ್ದ ಹಾಗೆ.

ಶ್ರೀ ಡಿ.ಕೆ. ಶಿವಕುಮಾರ್: ಎರಡು ಮೂರು ವರ್ಷದ ಕೆಳಗೆ "ಭಾರತದಲ್ಲಿ ಸಾಮಾನ್ಯವಾಗಿ middle class ಜನ ಅತಿ ಹೆಚ್ಚು ಊಟ ಮಾಡುತ್ತಿದ್ದಾರೆ, ಅದರಿಂದ ಪ್ರಪಂಚದಲ್ಲಿ ಆಹಾರಕ್ಕೆ ಅಭಾವ ಕಂಡು ಬರುತ್ತಿದೆ" ಎಂದು ಬುಷ್‌ರವರು ಹೇಳಿದ ಮಾತು ನನಗೆ ನೆನಪಾಗುತ್ತದೆ. ಅಂಥ ಸಂದರ್ಭ ಇವತ್ತು ನಾವು ಮತ್ತೆ ಅವರ ಮುಂದೆ ಹೋಗಿ ಭಿಕ್ಷುಕರಾಗಿ ನಿಂತು ಕೊಳ್ಳುತ್ತಿದ್ದೇವೆ. ಭಿಕ್ಷುಕರಾಗಿ ಭಿಕ್ಷೆಯನ್ನು ಬೇಡುತ್ತಿದ್ದೇವೆ. ಜಿ-8 ಜೊತೆಯಲ್ಲಿ ನಾವು ಕುಳಿತುಕೊಳ್ಳುತ್ತಿದ್ದೇವೆ. ನಮ್ಮ ಭಾರತದ ಆರ್ಥಿಕವಾದಂಥ ಶಕ್ತಿ ಎಷ್ಟು ಇದೆ ಎಂದರೆ, ಇಡೀ ಪ್ರಪಂಚ ಆರ್ಥಿಕ ವ್ಯವಸ್ಥೆಯಲ್ಲಿ ಕುಸಿದಿದ್ದರೂ ಕೂಡ ಈ ದೇಶದ ಧಾರ್ಮಿಕ ನೀತಿ, ಆರ್ಥಿಕ ನೀತಿ, ಎಲ್ಲಾ ಕೂಡ ನಮ್ಮ ದೇಶದ

ಸಂಸ್ಕೃತಿಯ ಹಿನ್ನೆಲೆಯಲ್ಲಿ ಇನ್ನು ನಮ್ಮ ಪಾಯ ಅಡಿಬದ್ರವಾಗಿ, ಆರ್ಥಿಕವಾದ ಶಕ್ತಿ, ಆಹಾರದಲ್ಲೂ ಎಲ್ಲಾದರಲ್ಲೂ ಕೂಡ ನಮ್ಮ ಭಾರತಕ್ಕೆ ತನ್ನದೇ ಆದಂಥ ಶಕ್ತಿ ಇದೆ. ಇದಕ್ಕೆ ನಮ್ಮ ದೇಶದ ಎಲ್ಲಾ ನಾಯಕರುಗಳು ಕಾರಣ. ನಾನು ಬರಿ ಕಾಂಗ್ರೆಸ್ ಪಕ್ಷದವರು ಮಾತ್ರ ಇತರೆಯವರು ಅಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ದೇಶದ ಎಲ್ಲಾ ನೂರು ಕೋಟಿ ಜನರು ಕೂಡ ಪ್ರತಿಯೊಂದರಲ್ಲಿ ಅವರದೇ ಆದಂಥ contribution ಅನ್ನು ಮಾಡಿ ತೋರಿಸಿದ್ದಾರೆ. ಇಂಥ ಸಂದರ್ಭದಲ್ಲಿ ನಾವು ಇವತ್ತು ಭಿಕ್ಷೆ ಎತ್ತುವುದಕ್ಕೆ ಹೋಗಿದ್ದೇವೆ. ಕರ್ನಾಟಕ ಸರ್ಕಾರ ಈ ಒಂದು ಕಾರ್ಯಕ್ರಮವನ್ನು ತಂದಿತು. ಈ ಕಾರ್ಯಕ್ರಮ ತಂದಿದ್ದರಿಂದ ಬಹಳಷ್ಟು ಜನ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಮೂರು ರೂಪಾಯಿಗೆ, ಎರಡು ರೂಪಾಯಿಗೆ, ಊಟ ಕೊಡುತ್ತಿದ್ದಾರೆ. ಎಲ್ಲಾ ಕಡೆಗೂ ಎಲ್ಲಾ ಭಾಗದಲ್ಲೂ, ನಿಮ್ಮಲ್ಲೂ ಕೂಡ, ಶಾಲೆಯಲ್ಲಿ ಸರ್ಕಾರ ಏನು ಹಣ ಕೊಡುತ್ತಿದೆ ಆ ಹಣ ತೆಗೆದುಕೊಂಡು ಈ ಕಾರ್ಯಕ್ರಮ ಮಾಡಿ ಅದರಲ್ಲೂ ಹಣ ಉಳಿತಾಯವಾಗುತ್ತಿತ್ತು. ಬೆಂಗಳೂರಿನಲ್ಲಿ ಅದಮ್ಯ ಚೇತನ ಎನ್ನುವ ಸಂಸ್ಥೆಯವರು ಕೂಡ ಈ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ websiteನಲ್ಲಿ ಮತ್ತೊಂದು ಕಡೆ ಏನು ಹೇಳುತ್ತಾರೆಂದರೆ, ನಾವು ಎರಡು ರೂಪಾಯಿಗೆ ಊಟ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದಮ್ಯ ಚೇತನ ಎನ್ನುವ ಸಂಸ್ಥೆಯವರು ಬಹಳ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಆದರೆ ಬೆಂಗಳೂರು ನಗರದಲ್ಲಿ ಇದೇ ಸಂಸ್ಥೆಯವರು ಏನು ಹೇಳುತ್ತಾರೆಂದರೆ, 9 ಲಕ್ಷದ 94 ಸಾವಿರ ಜನರಿಗೆ ಊಟ ಕೊಡುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಯಾರು ಹೇಳತ್ತಾರೆ?

ಶ್ರೀ ಡಿ.ಕೆ. ಶಿವಕುಮಾರ್: ಅದಮ್ಯ ಚೇತನರವರು ಎರಡು ರೂಪಾಯಿಗೆ ಊಟ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇಸ್ಕಾನ್ ಸಂಸ್ಥೆಯವರು ಏನು ಹೇಳುತ್ತಾರೆಂದರೆ, ನಾವು ಸುಮಾರು ಒಂಬತ್ತು ಲಕ್ಷಕ್ಕಿಂತಲೂ ಹೆಚ್ಚಿನ ಜನರಿಗೆ ಊಟ ಕೊಡುತ್ತಿದ್ದೇವೆ, ನಮಗೆ ಏನಾಗುತ್ತದೆಂದರೆ, ಅಕ್ಷಯಪಾತ್ರೆ ಫೌಂಡೇಷನ್‌ನವರು The Akshaya Patre Mid-day meal programme is a professionally managed in the most contributory manner, spending Rs. 6/- per child per day to provide hygienic nutrition meal ಪಾಪ ಅವರು ಆರು ರೂಪಾಯಿ ಎಂದು ಹೇಳಿದ್ದಾರೆ. ಅವರು ಎಲ್ಲಾ ಕಡೆ

ಮಾರ್ಕೆಟಿಂಗ್ ಮಾಡುತ್ತಿದ್ದಾರೆ. ನಮಗೆ ದುಡ್ಡು ಇಲ್ಲ ನಮಗೆ ದುಡ್ಡು ಬೇಕೆಂದು ಬೇಕಾದಷ್ಟು ಮಾರ್ಕೆಟಿಂಗ್ ಮಾಡಲಿಕ್ಕೆ ತಮ್ಮ ಜನಗಳನ್ನು ಇಟ್ಟಿದ್ದಾರೆ. ಪ್ರತಿಯೊಂದು ಅಪ್ಲಿಕೇಷನ್ಸ್ ಇದೆ ತಮಗೂ ಕಳುಹಿಸಿ ಕೊಡುತ್ತೇನೆ, ಅಮೇರಿಕಾದಲ್ಲಿ ಒಂದು ಸಂಸ್ಥೆಯನ್ನು ಪ್ರಾರಂಭಿಸಿ ಅಲ್ಲಿ ದುಡ್ಡು ಎತ್ತುತ್ತಿದ್ದಾರೆ. ಒಂದು ಮಗುವಿಗೆ 28 ಡಾಲರ್ ಬೇಕಂತೆ. ಆ ಅಪ್ಲಿಕೇಷನ್ ತಮಗೆ ಕಳುಹಿಸಿ ಕೊಡುತ್ತೇನೆ. ಭಾರತದಲ್ಲಿ ಒಂದು ಮಗುವಿಕೆ 1,200 ರೂಪಾಯಿ ಬೇಕಂತೆ. ಅಂದರೆ 6 ರೂಪಾಯಿನಂತೆ ಕೇಳುತ್ತಿದ್ದಾರೆ. ಇದನ್ನು ನಾನು ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ಬಗ್ಗೆ ಅವರಿಗೆ ಚರ್ಚೆ ಮಾಡಲು ನೇರವಾಗಿ ಅವಕಾಶ ಕೊಟ್ಟು ಬಿಡಿ.

ಶ್ರೀ ಡಿ.ಕೆ. ಶಿವಕುಮಾರ್: ತಾವು ಕೃಷ್ಣರಂತಾಗಬೇಕು. ತಾವು ಭಗವಂತರಾಗಬೇಕು.

ಅಧ್ಯಕ್ಷರು: ಶಿವಕುಮಾರ್‌ರವರೆ ಅವರು ಏನು ಹೇಳುತ್ತಾರೆ ಮೊದಲು ಕೇಳೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಈಗ ಪ್ರಸ್ತಾಪಿಸತಕ್ಕಂಥ ವಿಚಾರಕ್ಕೆ ನಾನು ಯಾವ ರೀತಿಯಲ್ಲಿ ಅಡತಡೆ ಮಾಡುವುದಿಲ್ಲ. ನಾನು ಹೇಳುವುದೆನೆಂದರೆ, ತಾವು ನಿಯಮ 60ರಡಿಯಲ್ಲಿ ನಿಲುವಳಿ ಸೂಚನೆಗೆ ಪ್ರಸ್ತಾವಿಕವಾಗಿ preliminary submissionಗೆ ಸೂಚಿಸಿದ್ದೀರಿ. Preliminary submission ಒಳಗೇ ಎಲ್ಲಾ ವಿಷಯ ಪ್ರಸ್ತಾಪಿಸುವುದಕ್ಕಿಂತಲೂ ಅವರಿಗೆ ತಾವು ಯಾವ ರೂಪದಲ್ಲಿ ಚರ್ಚೆ ಮಾಡಲು ಅವಕಾಶ ಕೊಡುತ್ತೀರಿ, ಆಗ ಅವರು ಬೇಕಾದರೆ ಸವಿಸ್ತಾರವಾಗಿ ಚರ್ಚೆ ಮಾಡಬಹುದು ಎಂಬುದು ನನ್ನ ವಿನಂತಿ ಅಷ್ಟೆ.

ಶ್ರೀ ಡಿ.ಕೆ. ಶಿವಕುಮಾರ್: I am coming to the main subject.

ಅಧ್ಯಕ್ಷರು: ಶಿವಕುಮಾರ್‌ರವರೆ, ನಾವು ನಿಮಗೆ ಚರ್ಚೆ ಮಾಡುವುದಕ್ಕೆ ಅಡತಡೆ ಮಾಡುತ್ತಿಲ್ಲ. ಸರ್ಕಾರದ ಪರವಾಗಿ ವಿಶ್ವೇಶ್ವರ ಹೆಗಡೆಯವರು ಏನು ಹೇಳುತ್ತಿದ್ದಾರೆ, ಈಗಾಗಲೇ ಅವರು ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ನಾವು ರೆಡಿ ಇದ್ದೇವೆಂದು ಹೇಳಿದರು. ನೀವು ಈಗ ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ನೀವು ಇದನ್ನು ಮುಂದುವರಿಸಿ. ನಾನು ಬೇಡವೆಂದು ಹೇಳುವುದಿಲ್ಲ. ನೀವು ಈಗ ಡಿಟೇಲ್ಸ್‌ಗೆ ಹೊರಟರೆ ಪ್ರಿಲಿಮಿನರಿ

ಸಬ್‌ಮಿಷನ್ ಆಗುವುದಿಲ್ಲ. ಅದಕ್ಕೆ ನಾನು ನಿಮಗೆ ಅವಕಾಶ ಕೊಡುತ್ತೇನೆ. We have to convert it.

ಶ್ರೀ ಡಿ.ಕೆ. ಶಿವಕುಮಾರ್: I will come to the point.

ಅಧ್ಯಕ್ಷರು: ನೀವು continue ಮಾಡಿ ಅವರು ಉತ್ತರ ಕೊಡುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್: ಹಾಗಾದರೆ ನಾನು continue ಮಾಡಿಬಿಡಲೆ? O.K. Yes.

ಅಧ್ಯಕ್ಷರು: ಇವತ್ತಾದರೂ ಕಂಟಿನ್ಯೂ ಮಾಡಬಹುದು, ಬೇಕಾದರೆ ಮತ್ತೊಂದು ದಿವಸವಾದರೂ ಕಂಟಿನ್ಯೂ ಮಾಡಬಹುದು. ಕಂಟಿನ್ಯೂ ಮಾಡಿಬಿಡಿ.

ಶ್ರೀ ಡಿ.ಕೆ. ಶಿವಕುಮಾರ್: ಈಗ ಕಂಟಿನ್ಯೂ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: Under what provision? whether it is under rule 60 or 69 ಯಾವ ರೂಪದಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು: Under Rule 69 ಶಿವಕುಮಾರ್‌ರವರೆ, ನಾನು ಇದನ್ನು convert ಮಾಡುತ್ತೆನೆ. ನೀವು continue ಮಾಡಿ. ನೀವು ಆಗ detail ಆಗಿ ಹೇಳುವುದಕ್ಕೆ ಆಗುತ್ತದೆ. ನೀವು ಈಗ ಚೆನ್ನಾಗಿ ಮಾತನಾಡುತ್ತಿದ್ದೀರಿ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರು ಹಾಗೂ ಇತರೆ ಸದಸ್ಯರು ಅಕ್ಷರ ದಾಸೋಹ ಕಾರ್ಯಕ್ರಮವನ್ನು ಖಾಸಗೀಕರಣದ ಕುರಿತು ಹಾಗೂ ಇಸ್ಕಾನ್ ಸಂಸ್ಥೆಯು ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ದೇಶದ ಬಡಮಕ್ಕಳ ಭಾವಚಿತ್ರಗಳನ್ನು ವಿದೇಶಗಳಲ್ಲಿ ಪ್ರದರ್ಶಿಸಿ, ಕೋಟ್ಯಾಂತರ ರೂಪಾಯಿಗಳ ದೇಣಿಗೆ ಸಂಗ್ರಹಿಸುವ ಬಗ್ಗೆ, ಸದರಿ ಸಂಸ್ಥೆಯು Real Estate ದಂಧೆ ನಡೆಸುವ ಕುರಿತು ಹೀಗೆ ಎರಡು–ಮೂರು ವಿಷಯಗಳನ್ನು ಸೇರಿಸಿ ನಿಲುವಳಿ ಸೂಚನೆ ನೀಡಿರುತ್ತಾರೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 62ರ ಮೇರೆಗೆ, ನಿಲುವಳಿ ಸೂಚನೆಯು ಸಾರ್ವಜನಿಕ ಮಹತ್ವವುಳ್ಳ ಇತ್ತೀಚೆಗೆ ನಡೆದ ಒಂದು ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರಬೇಕು. ಆದರೆ, ಪ್ರಸ್ತಾಪಿತ ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ಅಡಕವಾಗಿರುತ್ತವೆ. ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸುವ ವಿಷಯಗಳನ್ನು ಬೇಡಿಕೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲೂ ಕೂಡ ಪ್ರಸ್ತಾಪಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ

ನಿಲುವಳಿ ಸೂಚನೆಗೆ ಅನುಮತಿನ್ನು ತಡೆಹಿಡಿದು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಡಿ.ಕೆ. ಶಿವಕುಮಾರ್ ಹಾಗೂ ಇನ್ನಿತರು ಸದಸ್ಯರು, ಇವತ್ತೇನು ಈ ವಿಷಯ ಇಲ್ಲಿ ಪ್ರಸ್ತಾಪಿಸಲಿಕ್ಕೆ ಅವಕಾಶಬೇಕೆಂದು ಹೇಳುತ್ತಿದ್ದಾರೆ. ಈ ನಿಲುವಳಿ ಸೂಚನೆಯನ್ನು ರೂಲ್ 69ಗೆ ಪರಿವರ್ತನೆ ಮಾಡಿ ನಿಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

4. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ISKCON ಸಂಸ್ಥೆ ನಡೆಸುತ್ತಿರುವ ಅಕ್ಷರ ದಾಸೋಹ ಕಾರ್ಯಕ್ರಮದ ಬಗ್ಗೆ

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಬಹಳ ಸಂತೋಷ. Because this is a matter of public interest. It is not in the role of Government, it is a common man's topic. ಇವತ್ತು ನಾವು ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದೊಂದು ಸಂವಿಧಾನವಾಗಿ ಮಾನ್ಯತೆ ಪಡೆದಂಥ ಅಧಿಕೃತ ಜನರ ವೇದಿಕೆ ನಮ್ಮ ವಿಧಾನ ಸಭೆ. ಇಲ್ಲಿ ಇಂಥ ವಿಚಾರವನ್ನು ನಾವು ಪ್ರಸ್ತಾಪ ಮಾಡಲಿಲ್ಲವೆಂದರೆ, ಕೆಲವು ವಿಚಾರಗಳು ನೇರವಾಗಿ ಸರ್ಕಾರಕ್ಕೆ ಸಂಬಂಧಪಡದೇ ಇರಬಹುದು. ಆದರೆ, ಇದು ಎಲ್ಲಾ ಜನರ ಹಿತ ಇದರಲ್ಲಿರುವಂಥ ವಿಚಾರ. ಇಲ್ಲಿ Government's reply is not important. ಸರ್ಕಾರ ಇದರ ಬಗ್ಗೆ ಉತ್ತರ ಕೊಟ್ಟು ಬಿಟ್ಟುಬಿಡಬಹುದು. ಇದರ ಆಗು ಹೋಗುಗಳು, ಇದರ ಬದುಕು ಏನಾಗುತ್ತದೆ, ಇದು ಮುಂದಕ್ಕೆ ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದೆ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ಇದು ದೇಶದ ಸ್ವಾಭಿಮಾನದ ಪ್ರಶ್ನೆ. ನಮ್ಮ ನಾಗರೀಕರು ರಾತ್ರೋರಾತ್ರಿ ನಮ್ಮದೇ ಆದಂಥ ಚಿತ್ರಣ ಮಾಡಲಿಕ್ಕೆ ತಯಾರಿಲ್ಲ. ಏಕೆಂದರೆ, ಪಾಪ ಒಳ್ಳೆಯ ಕೆಲಸ ಮಾಡುವವರನ್ನು ನಾವು ಈ ಸಂದರ್ಭದಲ್ಲಿ ಅಭಿನಂದಿಸಲೇಬೇಕು. ಕೆಲವು ಸಂದರ್ಭದಲ್ಲಿ ಒಳ್ಳೆಯ ಕೆಲಸವಾಗಿದೆ. ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ನನ್ನ ಮೂಲ ವಿಚಾರ ಏನೆಂದರೆ, ನಾವು ಅಂದರೆ ಸರ್ಕಾರದ ಕಾರ್ಯಕ್ರಮ ಮಾಡಿದ್ದೇವೆ. ಸರ್ಕಾರ ಕಾರ್ಯಕ್ರಮ ಮಾಡುವಾಗ ಸರಕಾರದ ಹಣ ತೆಗೆದುಕೊಂಡು, ನಿನ್ನೆ ನಮ್ಮ ಸ್ನೇಹಿತರು ಈ ಬಗ್ಗೆ ಒಂದು ಪ್ರಶ್ನೆ ಕೇಳಿದ್ದರು. ಅದರಲ್ಲಿ ಯಾರ್ಯಾರು ಮಾಡುತ್ತಿದ್ದಾರೆ, ಏನೇನು ಮಾಡುತ್ತಿದ್ದಾರೆ ಈ ಬಗ್ಗೆ ಪಟ್ಟಿ ಕೊಡಿ ಎಂದು ಕೇಳಿದ್ದಾರೆ. ಆ ಉತ್ತರದ ಪಟ್ಟಿಯಲ್ಲಿ ಅನೇಕ ಜನರು ಇದ್ದಾರೆ. ಪಾಪ ಅವರೆಲ್ಲ ಬಹಳ ಗೌರವದಿಂದ